# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.32-2011** **ಡಿ. ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎನ್.ವಿ.ಶಿವಲಿಂಗಪ್ಪ<br>ನಂಜೀಪುರ |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 14-11-2024.** |

**<u>ಪಾಟೀ ಸವಾಲುಃ  ವಾದಿಗಳ ಪರ ಶ್ರೀ ಕೆ.ಟಿ.ಆರ್ ವಕೀಲರಿಂದಃ</u>**

ನಾನು ಬಿ.ಎಸ್ಸಿ ಪದವಿಧರ. ನಾನು ಈಗ ಹಾಲಿ ಮೈಸೂರಿನಲ್ಲಿ ವಾಸವಿದ್ದು, ನಾನು ಮೂಲತಃ ನಂಜೀಪುರ ಗ್ರಾಮದ ವಾಸಿಯಾಗಿರುತ್ತೇನೆ. ನಾನು ಸುಮಾರು 10-12 ವರ್ಷಗಳಿಂದ ಮೈಸೂರಿನಲ್ಲಿ ವಾಸವಾಗಿರುತ್ತೇನೆ. ಪಂಚಾಯ್ತಿಯು ನಮ್ಮ ಮನೆಯ ಮುಂಭಾಗದಲ್ಲಿ ಇರುವ ಜಗುಲಿಯ ಬಳಿ ಜರುಗಿರುತ್ತದೆ. ಪಂಚಾಯ್ತಿ ಪಾರಿಕತ್ತನ್ನು ಸಹ ಅಲ್ಲಿಯೇ ಬರೆಯಲಾಗಿರುತ್ತದೆ. ಪಂಚಾಯ್ತಿ ಪಾರಿಕತ್ತು ಆಗುವ ಸಮಯ ಸುಮಾರು15-20 ಜನರು ಇದ್ದರು. ಪಂಚಾಯ್ತಿ ನನ್ನ ತಂದೆಯವರು ಸಮಕ್ಷಮ 1985-86 ರಲ್ಲಿ ಆಗಿರುತ್ತದೆ. ಪಂಚಾಯ್ತಿ ಪಾರಿಕತ್ತನ್ನು 1992 ರಲ್ಲಿ ಬರೆಯಲಾಗಿರುತ್ತದೆ. ಬಿಕ್ಲಂದಾರರನ್ನೇ ಪಂಚಾಯ್ತಿ ಪಾರಿಕತ್ತು ಬರೆಯಲು ಊರಿಗೆ ಕರೆಸಲಾಗಿತ್ತು. ಪಂಚಾಯ್ತಿ ಪಾರಿಕತ್ತನ್ನು ಬರವಣಿಗೆ ಮಾಡಿದಾಗ 10-12 ಜನ ಇದ್ದರು. ಪಂಚಾಯ್ತಿ ಪಾರಿಕತ್ತನ್ನು ಬರೆಯುವ

ಸಮಯ ನನ್ನ ತಂದೆಯವರು ಜೀವಂತ ಇರಲಿಲ್ಲ. ಅವರು 1986 ರಲ್ಲಿಯೇ ಮರಣ ಹೊಂದಿದ್ದರು. ಪಂಚಾಯ್ತಿ ಪಾರಿಕತ್ತನ್ನು ಬರೆಯುವ ಸಮಯ ಮಹದೇವಪ್ಪ, ಶಂಭುಲಿಂಗಪ್ಪ, ಮಲಿಯಯ್ಯ ಮತ್ತು ಇತರರು ಇದ್ದರು. ಪಂಚಾಯ್ತಿ ಪಾರಿಕತ್ತಿಗೆ ಚಿಕ್ಕಗಂಡಯ್ಯನವರ ಪತ್ನಿ ಮಹದೇವಮ್ಮ ರವರು ಸಹಿ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಮ್ಮಲ್ಲಿ ಹೆಣ್ಣು ಮಕ್ಕಳನ್ನು ಪಂಚಾಯ್ತಿಗೆ ಕರೆಸುವ ಪದ್ಧತಿ ಇರುವುದಿಲ್ಲ. ನಿಡಿ–10 ರಲ್ಲಿ ಚಿಕ್ಕಗಂಡಯ್ಯನವರ ಪತ್ನಿ ಮಹದೇವಮ್ಮ ರವರು ಪಂಚಾಯ್ತಿ ಪಾರಿಕತ್ತಿಗೆ ಸಹಿ ಮಾಡಿರುತ್ತಾರೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ನಿಡಿ–10 ಪಂಚಾಯ್ತಿ ಪಾರಿಕತ್ತನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪಂಚಾಯ್ತಿ ಪಾರಿಕತ್ತಿಗೆ ಸಂಬಂಧಪಟ್ಟಂತೆ ಮಾತುಕತೆ ಆದ ಸಮಯ ಮತ್ತು ಪಂಚಾಯ್ತಿ ಪಾರಿಕತ್ತನ್ನು ಮಾಡಿದ ಸಮಯ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಚರ್ಚೆ ಆಗಿರುವುದಿಲ್ಲ ಮತ್ತು ವಿಭಾಗವನ್ನು ಮಾಡಿರುವುದಿಲ್ಲ. ನಿಡಿ–10 ರಲ್ಲಿ ಪಂಚಾಯ್ತಿ ಪಾರಿಕತ್ತನ್ನು ಓದಿ ಹೇಳಲಾಯಿತು ಎಂಬುದರ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎಂದರೆ ಸರಿ. ಪಂಚಾಯ್ತಿ ಪಾರಿಕತ್ತಿಗೆ ಯಾರು ಯಾರು ಸಹಿ ಮಾಡಿದ್ದಾರೆ ಮತ್ತು ಯಾರು ಯಾರು ಹೆಬ್ಬೆಟ್ಟು ಗುರುತು ಹಾಕಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಒಬ್ಬಿಬ್ಬರನ್ನು ಮರೆತಿರಬಹುದು, ಸಾಕ್ಷಿ ಮುಂದುವರೆದು ಪಂಚಾಯ್ತಿ ಪಾರಿಕತ್ತಿಗೆ ಸಹಿ ಹಾಕಿದವರ ಪೈಕಿ ನನ್ನನ್ನು ಹೊರತುಪಡಿಸಿ ಬೇರೆ ಎಲ್ಲರೂ ಮರಣ ಹೊಂದಿರುತ್ತಾರೆ

ಎಂದು ನುಡಿಯುತ್ತಾರೆ. ನಂಜಯ್ಯನವರ ನನ್ನ ಬಳಿ ಕೂಲಿ ಆಳಾಗಿ ಕೆಲಸ ಮಾಡುತ್ತಿದ್ದುದ್ದರಿಂದ ಅವರ ಮಕ್ಕಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**